**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 926/2023**

**ಫಿರ್ಯಾದುದಾರರು** ದಿ. ಜನತಾ ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಭಟ್ಕಳ,

**- ವಿರುದ್ಧ -**

**ಆರೋಪಿತರು** **ಮೊಹಮ್ಮದ್ ಶಬ್ಬಿರ್ ತಂದೆ ಮೊಹಮ್ಮದ್ ಇಲಿಯಾಸ,**
ವಯಸ್ಸುಃ 33 ವರ್ಷ
ಸಾಃ ಅಸ್ಫಿಯಾ ವಿಲ್ಲಾ, ಶುಬಾಶ್ ನಗರ, ತಗ್ಗರಗೋಡು
ಜಾಲಿ ರಸ್ತೆ , ಭಟ್ಕಳ ತಾಲೂಕು.

**ಆಪಾದನೆ**

ಶ್ರೀಮತಿ ಅರ್ಜುಮನ್ ಬಾನು ಎಂಬುವರು ದಿನಾಂಕಃ 09-03-2021 ರಂದು ಪಿರ್ಯಾದಿ ಸಂಸ್ಥೆಯಿಂದ CC ಸಾಲ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆ: 1115 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಸದ್ರಿ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಾಗಿರುತ್ತೀರಿ. ಸದ್ರಿ ಸಾಲವನ್ನು ವಾರ್ಷಿಕ ಶೇಕಡಾ 15% ಬಡ್ಡಿ ಸಮೇತ ಮರುಪಾವತಿ ಮಾಡುವುದಾಗಿ ಕೆಲವೊಂದು ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಸದ್ರಿ ಸಾಲವನ್ನು ಒಪ್ಪಿಕೊಂಡಂತೆ ಅವಧಿಯೊಳಗೆ ಮರುಪಾವತಿ ಮಾಡಿರುವುದಿಲ್ಲ. ಸದ್ರಿ ಸಾಲದ ಮರುಪಾವತಿ ಮಾಡುವ ಸಲುವಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ , ಹೆಡ್ ಪೊಸ್ಟ್ ಆಫಿಸ್ ರಸ್ತೆ, ಭಟ್ಕಳದ ಚೆಕ್ ನಂಬರ್ 746888 ನ್ನು ರೂ.1,12,000/- (ರೂಪಾಯಿ ಒಂದು ಲಕ್ಷ ಹನ್ನೆರಡು ಸಾವಿರ ಮಾತ್ರ) ಕ್ಕೆ ದಿನಾಂಕಃ 20-01-2023 ಎಂದು ನಮೂದಿಸಿ ಚೆಕ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಭಟ್ಕಳ ಅರ್ಬನ್ ಕೊ-ಆಫ್ ಬ್ಯಾಂಕ್ ಲಿ. ಬಾಜಾರ್ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 02-02-2023 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 10-02-2023 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ಮುಟ್ಟಿದ 15 ದಿನಗಳೊಳಗೆ ಮರು ಪಾವತಿ ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 14-02-2023 ರಂದು ಜ್ಯಾರಿಯಾಗಿರುತ್ತದೆ. ಹೀಗೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ

ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ - ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ - ಇಲ್ಲ. ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ**

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 13-11-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.